ಸಂಜೆ ಆಕೆ, ಮನೆಮಂದಿಯ ಬಟ್ಟೆ ಒಗೆಯಲು ಕೆರೆಗೆ ಹೋದಾಗ ನಾಯ್ಕರ ಪಾರವ್ವ ಸಿಕ್ಕಳು.

'ಅವ್ವಾ, ಇನ್ನೂ ಎಳೇಹುಡುಗಿ ನೀನು. ನಿನ್ನ ಬಾಳು ಹಿಂಗಾತಲ್ಲಾ' ಅಂದಳು.

ಕೃಷ್ಣಾಬಾಯಿ ಮಾತಾಡಲಿಲ್ಲ.

'ಅವ್ವಾ, ನಾನೊಂದು ಮಾತು ಹೇಳ್ತೀನಿ. ಯಾರಿಗೂ ಹೇಳಬ್ಯಾಡ. ದೊಡ್ಡವ್ವ, ಆಕಿಯ ಇಬ್ಬರು ಮಕ್ಳು ಒಳ್ಳೇಮಂದಿ ಅಲ್ಲ. ಗೊತ್ತಾದರೆ ನಮ್ಮನ್ನ ಬದುಕಾಕೆ ಬಿಡಲ್ಲ. ನೀನು ಬಸಿರಾಗಿದ್ದೆ. ಪರಂಗಿ ಹಣ್ಣು ತಿನ್ನಿಸ್ಯಾರೆ, ಮದ್ದು ಅರೆದು ಹಾಕ್ಯಾರೆ. ನಿನ್ನ ಬಸಿರಿಳೀತು ಅವ್ವ. ನಿನ್ನ ಗಂಡ ಸಾಯಲಿಲ್ಲ. ಸಾಯಿಸ್ಯಾರೆ. ಅವತ್ತು ನನ್ನ ಕಾಳು ಹಸನು ಮಾಡಕ್ಕೆ ಕರೆದಿದ್ರು. ಕದ ಹಾಕಿತ್ತು ಅಂತ ಕಿಟಕೀ ತಾವ ಬಂದೆ. ಹೊರಸಿನ ಮ್ಯಾಲೆ ನಿನ್ಗಂಡ ಮಲಗಿದ್ದ. ದೊಡ್ಡಣ್ಣ ತಮ್ಮನ ಮಕಕ್ಕೆ ದಿಂಬಿಟ್ಟು ಒತ್ತಿದ. ಸಣ್ಣಣ್ಣ ನಿನ್ನ ಗಂಡನ ಕಾಲು ಬಿಗೀ ಹಿಡಿದು ಕುಂತಿದ್ದ. ಒದ್ದಾಡಿ ಒದ್ದಾಡಿ ನಿನ್ಗಂಡ ಉಸಿರು ಕಟ್ಟಿ ಸತ್ತ. ನಿಮಿಗೆ ಮಕ್ಕಳಾದರೆ ಆಸ್ತಿ, ಮನೀ ಹೋಗ್ತದೆ ಅಂತ ಹಿಂಗೆ ಮಾಡ್ಯಾರೆ. ನೀನು ಅವರ ಮನೀ ಆಳಷ್ಟೇ...'

ಪಾರವ್ವ ಹೋದ ಮೇಲೂ ಆಕೆ ದಿಗ್ಭ್ರಮೆಯಿಂದ ನಂಬಲಾಗದಂತೆ ಕುಂತಿದ್ದಳು.

ಮನೆಗೆ ಬಂದು ಮಾತಿಲ್ಲದೆ ದುಡಿದರೂ ಹೊಟ್ಯಾಗೆ ಬೆಂಕಿ ಹೊತ್ತಿಕೊಂಡಿತ್ತು. ಗೌಡರ ತಮ್ಮ ಲಾಯರ್ ಹನುಮಂತರಾಯಪ್ಪನನ್ನು ಕಾಣಬೇಕು ಅಂದುಕೊಂಡಳು.

ಆಗಲೇ ಮನೇಮಂದಿ ಲಗ್ನಕ್ಕೆ ಹೊರಟಿದ್ದರು. ಅತ್ತೆಯ ಅಣ್ಣನ ಮಗನ ಮದುವೆ. ಈ ಇಬ್ಬರು ಸೊಸೇರಿಗೆ ತಮ್ಮನ ಮದುವೆ. ಎಲ್ಲರೂ ಹೊರಟಾಗ ಮಾವ ಅಂದ.

'ಪಾಪ, ಆಕೀನೂ ಕರೀ. ನಮ್ಜೊತಿಗೆ ಬರಲಿ'.

'ಅದ್ಕೇ ನಿಂಗೆ ಬುದ್ಧಿ ಇಲ್ಲಾ ಅನ್ನಾದು. ಅವಳು ರಂಡಿಮುಂಡಿ ಅದಾಳ. ಮಡಿ ಹೆಂಗಸು ಅದಾಳ. ಅಮಂಗಳೆ ಆಕಿ. ಆಕೀನ ಕರೀತಾರಾ? ಥೂ ನಿನ್ನ...' ಅಂದಳು.

'ಕೃಷ್ಣೀ, ಮನ್ಯಾಗೇ ಇರು. ಭರಮಪ್ಪ ಕೊಟ್ಟಿಗೀ ಕೆಲಸಕ್ಕೆ ಬರ್ತಾನೆ. ಹಾಲು ಹೋಟ್ಲಿಗೆ ಕಳಿಸು. ಗಂಗಜ್ಜೀನ ಜೊತಿಗೆ ಮಲಗಾಕ ಕರೀ. ಮನೀ ಬಿಟ್ಟು ಎಲ್ಲಿಗೂ ಹೋಗಬ್ಯಾಡ. ತಿಳೀತಾ?' ತಲೆಯಾಡಿಸಿದಳು ಆಕೆ. ಅವರೆಲ್ಲಾ ಹೋದಮೇಲೆ ಮುಂಬಾಗಿಲು ಹಾಕಿ ಅಗಳೀ ಜಡಿದಳು. ಮನೀ, ಹೊಲದ ಕಾಗದ ಪತ್ರ, ಒಡವೀ ಎಲ್ಲಾ ಎಲ್ಲದಾವ ಹುಡುಕಲೇಬೇಕು. ಪಾರವ್ವ ಹೇಳಿದ್ದಳು. ಶೀನಪ್ಪ ಕುಲಕರ್ಣೆರ ಹೆಂಡತಿ ಸತ್ತಮ್ಯಾಲೆ ಆಕೀ ಗಂಡ ದೊಡ್ಡಪ್ಪನ ಸೇವೆ ಮಾಡಿದ್ದನಂತೆ. ಅವರು ಊರು ಬಿಟ್ಟು ಪೇಟೆಗೆ ಹೋಗುವಾಗ ಅವರ ಈ ಮನೆಯನ್ನು ಗಂಡನ ಹೆಸರಿಗೆ ಮಾಡ್ಯಾರಂತೆ. ಆಮೇಲೆ ಈ ಮನೆಗೆ ವಾಸಕ್ಕೆ ಬಂದು ಅವರ ಊರ ಹೊರಗಳ ಮನೀ ದನಕರ, ಸಾಮಾನಿಗೆ ಅಂತ ಮಾಡಿದರಂತೆ. ಆಮೇಲೇ ಆಕೀ ಲಗ್ನಾಗಿ ಬಂದಿದ್ದಂತೆ.

ಅತ್ತೆಯ ಕೋಣ್ಯಾಗೆ ಕಬ್ಬಿಣದ ತಿಜೋರಿ ಅದೆ. ಅದರ ಕೀಲಿ ಎಲ್ಲಿ ಹುಡುಕಿದರೂ ಸಿಗಲಿಲ್ಲ. ಕೊನೆಗೂ ಸಂಜೆಯ ವೇಳೆಗೆ ಉಗ್ರಾಣದ ನಾಗೊಂದಿಗೆಯ ಮೇಲಿನ ಬಟ್ಟೆಚೀಲದಾಗೆ ಸಿಕ್ಕಿತು. ತಿಜೋರಿ ಬಾಗಿಲು ತೆಗೆದು ಅವಳಿಗೆ ಮದುವೆಯಾಗೆ ಹಾಕಿದ ಒಡವೀ ಜೊತೆಗೆ ಕಾಗದ ಪತ್ರಗಳೆಲ್ಲ ಸಿಕ್ಕವು. ಅವನ್ನೆಲ್ಲ ಒಂದು ಹಳೇ ಗೋಣಿಚೀಲದಾಗೆ ಹಾಕಿ ಬಾಗಿಲಿಗೆ ಬೀಗ ಹಾಕಿ ಗೌಡರ ಮನಿಗೆ ಹೋದಳು. ಆಗಲೇ ಕತ್ತಲಾಗಿತ್ತು. ಪುಣ್ಯಕ್ಕೆ ಲಾಯರ್ ಹನುಮಂತರಾಯಪ್ಪ ಮನೆಯಾಗೇ ಇದ್ದರು.

ದೀಪ ಹಚ್ಚಿ ಎಲ್ಲಾ ಕಾಗದ ಪತ್ರಗಳನ್ನು ಪರಿಶೀಲಿಸಿದರು.

'ನಿನ್ನ ಮದುವಿಗೆ ಮೊದಲೇ ಮೂರ್ಜನ ಅಣ್ಣ-ತಮ್ಮಂದಿರು ಪಾಲಾಗ್ಯಾರೆ. ಮೂರ್ಜನಕ್ಕೂ ತಲಾ ಆರು ಆರು ಎಕರೆ ಪಾಲಾಗಿ ರಿಜಿಸ್ಟರ್ ಆಗ್ಯದೆ. ಆಮೇಲೆ ದೊಡ್ಡಪ್ಪನ ಹದಿನಾರು ಎಕರೆ ಕೊಂಡು ಇಬ್ಬರೂ ಎಂಟು ಎಂಟು ಎಕರೆ ರಿಜಿಸ್ಟರ್ ಮಾಡಿಸಿ ಕೊಂಡಾರೆ. ಪಾಲಾಗಿರದಿದ್ದರೆ ಅದ್ರಾಗೂ ನಿನ್ನ ಗಂಡಗೆ ಪಾಲು ಕೊಡಬೇಕಿತ್ತು. ಅದಕ್ಕೇ ಈ ಉಪಾಯ. ಈ ಮನೆತನದ ದೊಡ್ಡಮನೀನ ಶೀನಪ್ಪ ಕುಲಕರ್ಣೇರು ನಿನ್ನ ಗಂಡನಿಗೆ ದಾನಪತ್ರ ಮಾಡಿ ಕೊಟ್ಟಿದ್ದಾರೆ'.

ಎಲ್ಲಾ ಕೇಳಿದ ಮೇಲೆ ಆಕೆ ಪಾರವ್ವ ಹೇಳಿದ ತನ್ನ ಬಸಿರಿಳಿದಿದ ಕಥೆ, ಗಂಡನ ಸಾವಿನ ಕಥೆ ಹೇಳಕೊಂಡು ಅತ್ತಳು.